"ಬನ್ನಿ ಸರ್, ಶೂ ಕಳ್ಳ ಕೊನೆಗೂ ಸಿಕ್ಕಿಬಿದ್ದ!" ನಾನು ಅಧಿಕಾರಿಯನ್ನು ಸ್ವಾಗತಿಸಿದೆ.

ಆತನ ಮೊಗದಲ್ಲಿ ಅಚ್ಚರಿ.

"ಅಲ್ಲಾ ಸಾರ್, ಇವನ್ಯಾರು? ಶೂ ಕಳ್ಳನನ್ನು ಸಂಜೆಯಷ್ಟೇ ಹಿಡಿದೆನಲ್ಲ? ತೆಲುಗರ ಬೀದಿಯ ಹತ್ರ."

"ಹಾಗಿದ್ದರೆ ಶೂಗಳ ಕಳ್ಳರು ಇಬ್ಬರಿದ್ದಾರೆಯೆ?"

"ಗೊತ್ತಿಲ್ಲ. ಸಂಜೆ ಕರಮಚಂದರು ಮೂರ್ನಾಲ್ಕು ವಿಳಾಸಗಳನ್ನು ನೀಡಿ, ಆ ಮನೆಗಳಿಗೆ ಸೆನೆಟರ್ ಬ್ರಾಂಡಿನ ಶೂ ಕಳ್ಳ ಬರುವ ಸಾಧ್ಯತೆಯಿದೆ, ಮಫ್ತಿಯಲ್ಲಿ ಪೋಲೀಸರನ್ನು ಹಾಕಿ ಅಂತ ಹೇಳಿದ್ದರು. ನಾನು ಹಾಗೆಯೇ ಮಾಡಿದೆ. ಏಳು ಗಂಟೆಯ ಹೊತ್ತಿಗೆ, ತೆಲುಗರ ಬೀದಿಯ ಒಬ್ಬರ ಮನೆಗೆ ಬಂದ ಶೂ ಕಳ್ಳ ಸಿಕ್ಕಿ ಬಿದ್ದ. ಬಾದಾಮಿ ಅಂತ ಆತನ ಹೆಸರು. ಆದರೆ, ಆತ ಏನೂ ಬಾಯಿ ಬಿಡುತ್ತಿಲ್ಲ. ನಾಳೆ ಬೆಳಗ್ಗೆ ನಾನೇ ನಿಮ್ಮಲ್ಲಿಗೆ ಬರುವವನಿದ್ದೆ." ಡಿಸೋಜ ವಿವರಣೆ ನೀಡಿದ.

"ಇಬ್ಬರೂ ಶೂ ಕಳ್ಳರು. ಅವರಲ್ಲೊಬ್ಬ ಕೊಲೆಗಾರ ಕೂಡಾ!" ಕರಮಚಂದನ ಮಾತಿಗೆ ಅಧಿಕಾರಿಯ ಹುಬ್ಬು ಮೇಲೇರಿತು.

"ಡಿಸೋಜ, ನೀವು ಚಿಪ್ಪಣ್ಣನ ಕೊಲೆಗಾರನನ್ನು ಹುಡುಕುವ ಕೆಲಸ ನಿಲ್ಲಿಸಿ. ಇವ್ನೇ ಅವನನ್ನು ಕೊಂದವನು!"

ಕರಮಚಂದನ ಮಾತಿನಿಂದ ನಾವಿಬ್ಬರೂ ದಂಗಾದೆವು.

"ಏಯ್, ನಿನ್ನ ಹೆಸರೇನು? ಯಾಕೆ ಶೂ ಕದಿಯೋಕೆ ಬಂದಿ?" ಡಿಸೋಜ ದರ್ಪದಿಂದ ಪ್ರಶ್ನಿಸಿದ.

"ನಾನು ಪಳನಿ ಅಂತ. ಶೂ ಕದಿಯೋದು ಯಾಕೆ? ಹಾಕಿಕೊಳ್ಳೋಕೆ!"

"ಏಯ್, ಈ ರಾತ್ರಿಲಿ ಯಾರಾದರೂ ಶೂ ಕದಿಯೋಕೆ ಬರ್ತಾರೆಯೇ?"

ಪಳನಿ ಪ್ರತಿಯಾಡಲಿಲ್ಲ. ಆಗ ಕರಮಚಂದ ಮಧ್ಯೆ ಬಾಯಿ ಹಾಕಿದ,

"ದಶಗಣಪತಿಯವರ ಮನೆಗೆ ಬರುವವರೆಗೂ, ನನಗೆ ಇಬ್ಬರು ಕಳ್ಳರು ಇರುವ ಬಗ್ಗೆ ಗೊತ್ತೇ ಇರಲಿಲ್ಲ! ದಶಗಣಪತಿಯವರೇ, ನಿಮ್ಮ ಮನೆಗೆ ಬಂದ ಪಳನಿ ಕುರುಡರ ತರಹ ಕೈ ಮುಂದೆ ಮಾಡಿ ನಡೆಯುತ್ತಿದ್ದ ಅಂದಿರಲ್ಲ. ಅದು ಏಕೆನ್ನುವುದು ನಿಮ್ಮ ಶೂ ನೋಡಿದಾಗಲೇ ನನ್ಗೆ ವೇದ್ಯವಾಯಿತು. ಜೊತೆಗೆ, ನೀವು ಶೂ ಬದಲಿದ್ದರ ಬಗ್ಗೆ ಅನುಮಾನ ವ್ಯಕ್ತ ಪಡಿಸಿದಿರಲ್ಲ, ಅದೂ ನಿಜವೆನ್ನುವುದು ಅರಿವಾಯಿತು."

"ಅಂದ್ರೆ, ಶೂ ಬದಲಾಗಿದೆಯೇ?"

"ಹೌದು, ವ್ಯಕ್ತಿಯೊಬ್ಬ ಗಡಿಬಿಡಿಯಲ್ಲಿ ನಿಮ್ಮ ಶೂ ಹಾಕಿಕೊಂಡು ಹೋಗಿದ್ದಾನೆ. ಆತ ಯಾರು ಗೊತ್ತೇ? ಅದೇ ಬಾದಾಮಿ. ಆಮೇಲೆ ಬಾದಾಮಿಗೆ ತನ್ನ ಅಚಾತುರ್ಯ ಗೊತ್ತಾಗಿದೆ. ಆದರೆ, ತಾನು ಹಾಕಿಕೊಂಡು ಬಂದದ್ದು ಯಾರ ಶೂ? ಆ ವ್ಯಕ್ತಿಯನ್ನು ಪತ್ತೆ ಮಾಡುವುದು ಹೇಗೆ? ಆತನಿಗೊಂದು ಐಡಿಯಾ ಹೊಳೆಯುತ್ತದೆ. ನಿಕ್ ಶೂನ ಮಳಿಗೆಗೆ ಹೋಗಿ, ಖರೀದಿ ಮಾಡಿದವರ ಹೆಸರು ಪತ್ತೆ ಮಾಡುವುದು. ಶಿವದಾಸ್ ಅನ್ನುವ ಹೆಸರಿನಲ್ಲಿ ಬಸ್ ನಿಲ್ದಾಣದ ಸನಿಹದ ಅಂಗಡಿಗೆ ಹೋಗ್ತಾನೆ. ಅಲ್ಲಿ ಪಿಎಚ್.ಡಿ. ಮಾಡುವವನ ನೆಪದಲ್ಲಿ ವಿವರಗಳನ್ನು ಪಡೆಯುತ್ತಾನೆ. ಆದರೆ, ಆತ ಜೈನ್ ರಸ್ತೆಯಲ್ಲಿರುವ ಅಂಗಡಿಗೆ ಹೋಗೋದಿಲ್ಲ. ಯಾಕೆ? ಆ ಅಂಗಡಿಯಿಂದ ಆತನಿಗೆ ವಿವರಗಳು ಅಲ್ಲಿಗೆ ಹೋಗದೇನೆ, ದೊರಕಿರಲೇಬೇಕು ಎಂದು ಭಾವಿಸಬಹುದು. ಹೇಗೆ? ಪ್ರಾಯಶಃ ಅಲ್ಲಿ ಆತನ ಪರಿಚಯದವರು ಕೆಲಸ ಮಾಡ್ತಾ ಇರಬೇಕು. ಆತನಿಂದ ಗ್ರಾಹಕರ ಹೆಸರುಗಳನ್ನು ಪಡೆದಿರಲೇಬೇಕು. ನಾನು ಬಾದಾಮಿಯ ಆ ಮಿತ್ರನಲ್ಲಿ ಈ ಸಂಜೆ ಮಾತನಾಡಿ, ಖಚಿತಪಡಿಸಿಕೊಂಡಿದ್ದೇನೆ. ನಂತರ, ಬಾದಾಮಿ ಆ ಗ್ರಾಹಕರ ಮನೆಗೆ ಹೋಗಿ ಶೂಗಳನ್ನು ಕದಿಯಲು ಆರಂಭಿಸಿದ."